# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 04.01.2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ॥ ಎಂ. ಜಿ. ಹಳ್ಳಿ ಶಿವರಾಂ, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಸುಮಂತ್ ಗೌಡ ಸಿ. ಎಸ್., ಸಹಾಯಕ ಅಭಿಯಂತರರು, ವಾರ್ಡ್ ನಂ.42 ಹಾಗೂ ಸದಸ್ಯ ಕಾರ್ಯದರ್ಶಿ
3. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು,
4. ಮಣಿ ಮೇಘಲ್ಯೆ, ಕಿರಿಯ ಆರೋಗ್ಯ ಪರಿವೀಕ್ಷಕರು,
5. ಡಾ॥ ರೇಣುಕಾ ಪ್ರಸಾದ್.ಜಿ.ಎನ್.
6. ನಿರ್ಮಲ, ಕಂದಾಯ ವಸೂಲಿಗಾರರು,
7. ನರಸಿಂಹಯ್ಯ.ಎನ್. ಕಂದಾಯ ಪರಿವೀಕ್ಷಕರು
8. ದೀಪಕ್.ಹೆಚ್.ಸಿ, ಸ.ಅ.ಜಲಮಂಡಳಿ
9. ಎಂ.ನಾಗರಾಜು.ಬೆಸ್ಕಾಂ
10. ನಾರಾಯಣಸ್ವಾಮಿ, ಮೇಲ್ವಿಚಾರಕರು
11. ದೇವರಾಜ್, ಮೇಲ್ವಿಚಾರಕರು
12. ದಾಕ್ಷಯಣಿ ಲಿಂಕ್ ವರ್ಕರ್
13. ಪ್ರಮೀಳ ಲಿಂಕ್ ವರ್ಕರ್
14. ರಾಜು. ಬೀದಿ ದೀಪಗಳು
15. ಮಮತ.ಆರೋಗ್ಯ ಇಲಾಖೆ.

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಡಾ॥ರೇಣುಕ ಪ್ರಸಾದ್ ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ನಂದಿನಿ ಬಡಾವಣೆ, ರವರು ಮಾತನಾಡಿ ಆಸ್ಪತ್ರೆಯ ಒಳಗಡೆ ತುಂಬಾ ಗೋಡೆಗಳು ಹಾಗೂ ಮೇಲ್ಛಾವಣಿ ನೀರಿನಿಂದ ತೇವವಾಗಿದ್ದು ಜೊತೆಗೆ ಹೆರಿಗೆ ಆಸ್ಪತ್ರೆ ಇರುವುದರಿಂದ ಮಗು ಬಾಣಂತಿಯರಿಗೆ ತುಂಬಾತೊಂದರೆಯಾಗುತಿದ್ದು, ತಕ್ಷಣ ಸರಿಪಡಿಸಿ ಸುಣ್ಣ-ಬಣ್ಣ ಮಾಡಿಕೊಡಲು ಕೋರಿದ್ದು, ಅದನ್ನು ಅತೀ ಜರೂರೆಂದು ಪರಿಗಣಿಸಿ ದುರಸ್ಥಿ ಮಾಡಿಸ ಬೇಕೆಂದು ಕೋರಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು ಹಾಗೂ ಆಸ್ಪತ್ರೆಯ ಮುಂಭಾಗದ ರಸ್ತೆಯ ದುರಸ್ಥಿ ಬಗ್ಗೆ ಈಗಾಗಲೇ ಹಲವು ವಾರ್ಡ್ ಕಮಿಟಿ ಸಭೆಗಳಲ್ಲಿ ನಡವಳಿ ಮಾಡಿದ್ದರೂ ದುರಸ್ಥಿ ಆಗಿಲ್ಲವೆಂಬ ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತಂದರು. ಅಧ್ಯಕ್ಷರು ಗೊರಗುಂಟೆಪಾಳ್ಯ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕೂಡಲೇ ಪತ್ರ ಬರೆದು ದುರಸ್ಥಿ ಕಾರ್ಯಗಳನ್ನು ಆದ್ಯತೆ ಮೇಲೆ ಕೈಗೊಳ್ಳುವಂತೆ ಕೋರಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.42

Scanned by CamScanner

ವಾರ್ಡ್‌ನ ಸದಸ್ಯರು ಮಾತನಾಡಿ ಸಾಕಷ್ಟು ರಸ್ತೆಗಳಲ್ಲಿ ಬೀದಿ ದೀಪಗಳು ಕೆಲ ಸಮಯ ಬಂದು ನಂತರ ನಂದಿಹೋಗುವುದು ಸರ್ವೆಸಾಮನ್ಯವಾಗಿರುವುದು ಕಂಡುಬಂದಿದ್ದು, ಇದರ ಸಂಬಂಧ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಕೋರಿದರು.

**ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ (ಬೀದಿ ದೀಪಗಳು) ವಾರ್ಡ್ ನಂ.42**

ವಾರ್ಡ್ ನ ಸದಸ್ಯರು ಮಾತನಾಡಿ ಸಂಜಯಗಾಂಧಿನಗರದಲ್ಲಿ ಇದುವರೆವಿಗೂ ಕುಡಿಯುವ ನೀರಿನ ಅಂದರೆ ಕಾವೇರಿ ನೀರು 8 ರಿಂದ 10 ದಿನಕ್ಕೊಮ್ಮೆ ಬಿಡುತ್ತಿದ್ದು, ಸಾರ್ವಜನಿಕರಿಗೆ ನೀರಿಗಾಗಿ ಅಹಕಾರ ಕಂಡುಬಂದಿದ್ದು, ವಾರ್ಡ್ ಕಮಿಟಿ ಅಧ್ಯಕ್ಷರ ಗಮನಕ್ಕೆ ವಾರ್ಡ್ ಕಮಿಟಿಗಳಲ್ಲಿ ಹಲವು ಬಾರಿ ತಂದಿದ್ದರೂ ಜಲಮಂಡಳಿರವರು ಏನು ಕ್ರಮ ಕೈಗೊಳ್ಳದಿರುವುದರಿಂದ ವಾರಕ್ಕೆ ಕನಿಷ್ಠ 02 ಬಾರಿಯಾದರೂ ನೀರು ಒದಗಿಸುವಂತೆ ಕೋರಲಾಗಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

**ಕ್ರಮ: ಸಹಾಯಕ ಅಭಿಯಂತರರು, ಜಲಮಂಡಳಿ, ವಾರ್ಡ್ ನಂ.42**

ವಾರ್ಡ್ ನ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ತೆರವುಗೊಳಿಸಲು ಮಾನ್ಯ ಅಧ್ಯಕ್ಷರು ರವರು ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಎಲ್ಲಾ ಬ್ಲಾಕ್ ಸ್ಪಾಟ್ ಗಳಲ್ಲಿ ಕಸಗಳನ್ನು ತೆರವುಗೊಳಿಸಿರುವುದಾಗಿ ತಿಳಿಸದರು. ಬ್ಲಾಕ್ ಸ್ಪಾಟ್‌ಗಳಿಗೆ ಮಾರ್ಷಲ್ ರವರು ಕಿರಿಯ ಆರೋಗ್ಯ ಪರೀಕ್ಷಕಿ ಮತ್ತು ಮೇಲ್ವಿಚಾರಕರ ಜೊತೆಗೂಡಿ ಭೇಟಿ ನೀಡಿ ಕಸ ಹಾಕುವವರಿಗೆ ದಂಡ ವಿಧಿಸಿ ಸಂಬಂದಪಟ್ಟ ಪೋಲೀಸ್‌ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಬೇಕೆಂದು ಸೂಚಿಸಿದರೂ.

**ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ಮತ್ತು ಮಾರ್ಷಲ್ ವಾರ್ಡ್ ನಂ.42**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸುಮಂತ್ ಗೌಡ ಸಿ. ಎಸ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:42

(ಡಾ॥ ಎಂ. ಜಿ. ಹಳ್ಳಿ ಶಿವರಾಂ)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned by CamScanner